ಅ) ಪ್ರಸಕ್ತ ಸಾಲಿನಲ್ಲಿ ರೂ. 25.00 ಲಕ್ಷ ಒದಗಿಸಲಾಗಿದೆ.

ಇ) 1996-97 ಮತ್ತು 1997-98ನೇ ಸಾಲುಗಳಲ್ಲಿ ಯಾವುದೇ ಪ್ರಕರಣ ವರದಿಯಾಗಿಲ್ಲ

ಈ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ ರೂ. 140.00 ಲಕ್ಷ ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಬಂದರಿನಲ್ಲಿ ರೂ. 75.00 ಲಕ್ಷ ವೆಚ್ಚದಲ್ಲಿ ಹೂಳೆತ್ತುವ ಕೆಲಸ ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಉಡುಪಿ ಜಿಲ್ಲೆಯ ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ಹೂಳೆತ್ತುವ ಕೆಲಸ ಪ್ರಾರಂಭಿಸಲಾಗಿದೆ.

ಅಂಕೋಲ ತಾಲ್ಲೂಕಿನ ಬಂದರಿನಲ್ಲಿ ಹೂಳು ತೆಗೆಯುವುದು

236 (486) ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಅಂಕೋಲಾ ತಾಲ್ಲೂಕಿನಲ್ಲಿ ಯಾವ ಬಂದರಿನಲ್ಲಿ ಹೂಳೆತ್ತುವ ಕೆಲಸ ಪ್ರಗತಿಯಲ್ಲಿದೆ; (ವಿವರವಾದ ಮಾಹಿತಿ)

ಆ) ಬೇಲಕೇರಿ ಬಂದರಿನ ಹೂಳೆತ್ತುವ ಹಾಗೂ ಜಟ್ಟಿ ನಿರ್ಮಿಸುವ ಪ್ರಸ್ತಾವನೆಗೆ ಭಾರತ ಸರ್ಕಾರ ಮಂಜೂರಾತಿ ನೀಡಿದೆಯೇ;

ಇ) ತ್ವರಿತವಾಗಿ ಸರ್ಕಾರ ಇವರ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಕೆ. ಜಯಪ್ರಕಾಸ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಪ್ರಗತಿಯಲ್ಲಿಲ್ಲ

ಆ) ಹೌದು

ಇ) ಹೌದು

Widening of National Highway and state Highway in Uttara Karnataka District

238 (483) Sri. Visvesvara Hedge (Ankola) : Will the Minister for Public Works be pleased to State

a) Has Government taken up work relating to widening of National Highway and State Highway in Uttara Kannada District?

b) Now, at what places the work has started?

c) What is the width of the Natioinal Highway/State Highway?

d) In which taluk widering work is carried out

e) Was it come to the notice of Government the damage caused to properties of general public in Yellapur Sirsi.

f) Is there a proposal to construct Sirsi-Yellapur By-pass?

Sri C.M. UDASI (Minister for Public Works) :

a) The present National Highway No. 17 passing through Uttara Kannada District is already having two - way and there is no proposal at present to widen this road.

The work of widening of State Highway is taken up in stages. For details kindly see (d).

b) Work is taken up in Uttara Kannada District.

c) Two -way -7 metres wide.

Centre way - 5.50 metre wide.

d) The widening work of important State Highways of Uttara kannada District viz, Tumkur- Honnawara Road, Kumta - Hubli Road, Londa Sadashivanagar Road and Khanapur Nalaguppa Road, are taken up in stages in Siddapur, Honnawar, Kumta, Sirsi, Mundagod, Karwar, Joida, Halival, Yellapur taluks.

e) No

f) There is no proposal at present.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನುಗಾರರ ಬೋಟ್‌ಗೆ ಮಾರಾಟ ಸಬ್ಸಿಡಿ.

239 (485) ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ- ಕನ್ನಡ ಜಿಲ್ಲೆಯಲ್ಲಿ ಮೀನುಗಾರರ ಬೋಟ್‌ಗೇ ಸೇಲ್ ಸಬ್ಸಿಡಿ 1995-96, 1996-97, 1997-98 ಕ್ಕೆ ಎಷ್ಟು ಹಣ ನೀಡಿದೆ?

ಆ) ಇನ್ನು ನೀಡಬೇಕಾದ ಹಣವೆಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) 1995-96ನೇ ಸಾಲಿನಲ್ಲಿ 223 ದೋಣಿಗೆ ರೂ. 6.512 ಲಕ್ಷಗಳು